ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಕರ್ನಾಟಕ ವಿಧಾನ ಸಭೆ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ ದಿನಾಂಕ : DATE : 17/12/2019

# ಕೊಳೆಯುತ್ತಿದೆ ಸಂತ್ರಸ್ತರ ಆಹಾರ

## ರೇಣುಕಾಚಾರ್ಯ ಕಚೇರಿಯಲ್ಲೇ ಉಳಿದ ಪರಿಹಾರ ಸಾಮಗ್ರಿ

ವಿಜಯವಾಣಿ ಸುದ್ದಿಜಾಲ ಹೊನ್ನಾಳಿ

ಉತ್ತರಕರ್ನಾಟಕದ ಪ್ರವಾಹ ಸಂತ್ರಸ್ತರಿಗೆ ಸಂಗ್ರಹಿಸಿಟ್ಟಿದ್ದ ಆಹಾರ ಪದಾರ್ಥ, ಬಟ್ಟೆ-ಬರೆ ವಿತರಣೆಯಾಗದೆ ಹೊನ್ನಾಳಿ ಶಾಸಕ ಎಂ.ಪಿ.ರೇಣುಕಾಚಾರ್ಯ ಅವರ ಜನಸಂಪರ್ಕ ಕಚೇರಿಯಲ್ಲಿ ಕೊಳೆಯುತ್ತಿವೆ! ಈ ವಿಚಾರವನ್ನು ಕೆಲವರು ವಿಡಿಯೋ ಮಾಡಿ ಮಾಧ್ಯಮಗಳಿಗೆ ಸೋಮವಾರ ಬಿಡುಗಡೆ ಮಾಡಿದ್ದಾರೆ.

ಶಾಸಕರ ನೇತೃತ್ವದಲ್ಲಿ ನ್ಯಾಮತಿ- ಹೊನ್ನಾಳಿ ತಾಲೂಕುಗಳಲ್ಲಿ ಅಕ್ಕಿ, ಎಣ್ಣೆ, ಬೇಳೆ, ಸಕ್ಕರೆ, ಸೀರೆ, ಬ್ಲಾಂಕೆಟ್, ಸ್ವೆಟರ್ ಮತ್ತಿತರ ಸಾಮಗ್ರಿಯನ್ನು ಎರಡು ತಿಂಗಳ ಹಿಂದೆ ಸಂಗ್ರಹಿಸಲಾಗಿತ್ತು. ಮಳೆ ನಿಂತು, ಪ್ರವಾಹ ಇಳಿದು ಸಂತ್ರಸ್ತರು ತಂತಮ್ಮ ಸ್ಥಳಗಳಿಗೆ ವಾಪಸ್ ಹೋಗಿದ್ದರೂ ಅವರಿಗೆ ಸಂಗ್ರಹಿಸಿದ್ದ ಆಹಾರ ಪದಾರ್ಥ ಮಾತ್ರ ವಿತರಣೆಯಾಗಿಲ್ಲ. ಕೂಡಿಟ್ಟ ಅಕ್ಕಿ, ಬೇಳೆ, ಸಕ್ಕರೆ ಇನ್ನಿತರ ಪದಾರ್ಥಗಳನ್ನು ವಿತರಿಸುವ ಜವಾಬ್ದಾರಿಯನ್ನು ಅಧಿಕಾರಿ ವರ್ಗ ಕೂಡ ತೆಗೆದುಕೊಂಡಿಲ್ಲ. ಹಸಿದಾಗ ಊಟ ಕೊಡದೆ ಹೊಟ್ಟೆ ತುಂಬಿದಾಗ ಕೊಟ್ಟರೆ ಏನು ಪ್ರಯೋಜನ ಎಂದು ಜನರು ಪ್ರಶ್ನಿಸಿದ್ದಾರೆ. ಆಹಾರ ಪದಾರ್ಥ ಕೆಡುವ ಮುಂಚೆ ಸಂತ್ರಸ್ತರಿಗೆ ತಲುಪಿಸುವಂತೆ ಒತ್ತಾಯಿಸಿದ್ದಾರೆ.

**ಏನೇನು ಸಂಗ್ರಹ?:** 46.30 ಲಕ್ಷ ರೂ. ನಗದು, 370 ಕ್ವಿಂಟಾಲ್ ಅಕ್ಕಿ, 3.75 ಕ್ವಿಂಟಾಲ್ ಬೇಳೆ, 3070 ಸೀರೆ, ತೆಂಗಿನಕಾಯಿ, ಸಕ್ಕರೆ, ಸೋಪು, ಗೋಧಿ ಹಿಟ್ಟು, ಕೊಬ್ಬರಿ ಎಣ್ಣೆ, ಒಣ ಮೆಣಸಿನ ಕಾಯಿ ಇತರ ಪದಾರ್ಥಗಳು.



ನೆರೆ ಸಂತ್ರಸ್ತರಿಗೆ ಸಂಗ್ರಹಿಸಿ ಹೊನ್ನಾಳಿಯ ಶಾಸಕರ ಜನಸಂಪರ್ಕ ಕಚೇರಿಯಲ್ಲಿ ದಾಸ್ತಾನಿಟ್ಟಿದ್ದ ಆಹಾರ ಸಾಮಗ್ರಿ ಮತ್ತಿತರ ವಸ್ತುಗಳನ್ನು ಶಾಸಕ ರೇಣುಕಾಚಾರ್ಯ ಮಾಧ್ಯಮ ಪ್ರತಿನಿಧಿಗಳಿಗೆ ತೋರಿಸಿದರು.

ಉತ್ತರ ಕರ್ನಾಟಕದ ಯಾವುದಾದರೂ ಒಂದು ತಾಲೂಕಿಗೆ ಹೋಗಿ ಕೊಟ್ಟು ಬರೋಣ ಎಂದು ಶಾಸಕರು ಸೂಚಿಸಿದ್ದ ಹಿನ್ನೆಲೆಯಲ್ಲಿ ಅವರ ಸಮಯಕ್ಕೆ ಕಾದಿದ್ದೆವು. ಬರುವ ಶನಿವಾರ ಅವರ ನೇತೃತ್ವದಲ್ಲಿ ಉತ್ತರ ಕರ್ನಾಟಕಕ್ಕೆ ತೆರಳಿ ಪರಿಹಾರ ವಿತರಿಸುತ್ತೇವೆ.

| ತುಷಾರ್ ಬಿ. ಹೊಸೂರ ತಹಸೀಲ್ದಾರ್ ಹೊನ್ನಾಳಿ

ನೆರೆ ಸಂತ್ರಸ್ತರಿಗೆ ಸಂಗ್ರಹಿಸಿದ್ದ ಆಹಾರ ಪದಾರ್ಥಗಳ ವಿತರಣೆ ಉಪ ಚುನಾವಣೆ ಹಿನ್ನೆಲೆಯಲ್ಲಿ ವಿಳಂಬ ಆಗಿದ್ದು, ಶನಿವಾರ ಅಥವಾ ಭಾನುವಾರ ವಿತರಿಸಲಾಗುವುದು. 46.30 ಲಕ್ಷ ರೂ. ನಗದು ಇದ್ದು, ಶನಿವಾರದೊಳಗೆ 3.70 ಲಕ್ಷ ರೂ. ಸಂಗ್ರಹಿಸಿ ಸಿಎಂ ಪರಿಹಾರ ನಿಧಿಗೆ 50 ಲಕ್ಷ ರೂ. ನೀಡಲಾಗುವುದು. ಇದರಲ್ಲಿ ಅಧಿಕಾರಿಗಳಿಂದ ಲೋಪ ಆಗಿಲ್ಲ.

| ಎಂ.ಪಿ.ರೇಣುಕಾಚಾರ್ಯ ಶಾಸಕ